ಓ.ಎಸ್‌ಃ 364-2008

ಡಿ. ಡಬ್ಲ್ಯೂ ಃ 09

**<u>ಸಾಕ್ಷಿಗೆ ದಿನಾಂಕ 13.12.2021 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>**

ನನಗೆ ವಾದಿ ಹಾಗೂ 1 ರಿಂದ 7 ಹಾಗೂ ಅವರ ಕುಟುಂಬದ ಪರಿಚಯವಿರುತ್ತದೆ. ಮೃತ 1 ನೇ ಪ್ರತಿವಾದಿಗೆ ನಾನು ಖರೀದಿಸಿರುವ ಸ್ವತ್ತು ವಿಭಾಗ ಮುಖಾಂತರ ಬಂದಿರುತ್ತದೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗ ಪತ್ರ ನೋಡಿರುತ್ತೇನೆ, ಯಾವ ದಿನಾಂಕದಂದು ವಿಭಾಗ ಪತ್ರವಾಗಿರುತ್ತದೆ ನನಗೆ ಗೊತ್ತಿಲ್ಲ. ಸಾಕ್ಷಿಯು ಅವರ ಹೆಸರಿಗೆ ಖಾತೆ ಬದಲಾವಣೆ ಆಗಿತ್ತು ಎಂದು ನುಡಿಯುತ್ತಾರೆ. ಮೃತ ನಾಗರಾಜುರವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಗೂ ತಮ್ಮ ಮನೆಯನ್ನು ಕಟ್ಟಲು ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಮೃತ ನಾಗರಾಜು ರವರ ಮಕ್ಕಳು ಏನು ವಿದ್ಯಾಭ್ಯಾಸ ಮಾಡುತ್ತಿದ್ದರು ಹಾಗೂ ಎಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ನನಗೆ ಗೊತ್ತಿಲ್ಲ. ನಾಗರಾಜು ರವರು ತಮ್ಮ ಊರಿನಲ್ಲಿಯೇ ಮನೆಯನ್ನು ಕಟ್ಟುತ್ತಿದ್ದರು. ಮೃತ ನಾಗರಾಜು ರವರು ಮನೆಯನ್ನು ಕಟ್ಟಲು ಪರವಾನಗಿಯನ್ನು ಪಡೆದುಕೊಂಡಿದ್ದರೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಕ್ರಯಪತ್ರದಲ್ಲಿ ಆಸ್ತಿ ಮಾರಾಟ ಮಾಡುವ ಉದ್ದೇಶವನ್ನು ಬರೆದಿರುತ್ತಾರೆ. ನಾನು ಕ್ರಯಕ್ಕೆ ಪಡೆದುಕೊಂಡ ಸ್ವತ್ತಿನಲ್ಲಿ ವಾದಿಗೂ ಸಹಾ ಭಾಗಾಂಶ ಇದೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಮೃತ ನಾಗರಾಜು ರವರೊಂದಿಗೆ ಶರೀಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಓ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ